ದೂರವಾಣಿ/Phone: (O) :08254-230349
(Fax) : 08254 -232720
E-mail: *kpurforest@yahoo.com*
ಸ್ಥಳ: ಕುಂದಾಪುರ – 576201
Place: Kundapura - 576201

# ಕರ್ನಾಟಕ ಅರಣ್ಯ ಇಲಾಖೆ

## ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ – 576201

ಕ್ರಮಾಂಕ. ಡಿಎಂಎನ್/ವಿವ.50/ಡಿಎಫ್ಎಲ್/2015–16

ದಿನಾಂಕ: 11–04–2019.

**<u>ಪರಿಷ್ಕೃತ ಬೇಡಿಕೆ ಪತ್ರ</u>**

ವಿಷಯ: Diversion of 0.352 hectare of forest land in Sy No. 56 of Kollur village, Kundapura Taluk, Udupi District for construction of Vented Dam for providing water to Kollur village in favour of the Executive Officer, Sri Mookambika Temple, Kollur-reg.

ಉಲ್ಲೇಖ.
1) ಕೇಂದ್ರ ಸರ್ಕಾರದ Stage-I ಆದೇಶ ಸಂಖ್ಯೆ F.No.4-KRB1141/2018-BAN/1285 ದಿನಾಂಕ: 11–12–2018.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ Old File No.A5(2)/ GFL.CR-05/2016-17 ದಿನಾಂಕ: 04–01–2019.
3) ಈ ಕಛೇರಿ ಬೇಡಿಕೆ ಪತ್ರ ಸಮ ಸಂಖ್ಯೆ ದಿನಾಂಕ: 23–01–2019.
4) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಎ5 (3).ಜಿಎಫ್ಎಲ್/ಸಿಆರ್.28/2009–10 ದಿನಾಂಕ: 24–05–2018.

###############

ಶ್ರೀ ಮೂಕಾಂಬಿಕಾ ದೇವಸ್ಥಾನದ ವತಿಯಿಂದ ಕೊಲ್ಲೂರು ಕ್ಷೇತ್ರಕ್ಕೆ ಕುಡಿಯುವ ನೀರು ಯೋಜನೆ ಕಲ್ಪಿಸುವ ಬಗ್ಗೆ ವೆಂಟೆಡ್ ಡ್ಯಾಂ ನಿರ್ಮಾಣಕ್ಕಾಗಿ ಅನುಷ್ಠಾನ ಏಜೆನ್ಸಿಯಾದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಗುರುತಿಸಿದ ಕೊಲ್ಲೂರು ಗ್ರಾಮದ ಕಾಶಿಹೊಳೆ ಸಮೀಪ ಸ.ನಂ. 56 ರಲ್ಲಿ 0.352ಹೆ. ಪ್ರದೇಶವನ್ನು ಅರಣ್ಯ (ಸಂರಕ್ಷಣಾ) ಕಾಯ್ದೆಯಡಿ ಬಿಡುಗಡೆಗೊಳಿಸಲು ಆನ್ ಲೈನ ಮುಖಾಂತರ ನೀವು ಸಲ್ಲಿಸಲಾದ ಪ್ರಸ್ತಾವನೆ ಕುರಿತಂತೆ ಕೇಂದ್ರ ಸರ್ಕಾರವು ಉಲ್ಲೇಖ (1)ರಂತೆ ಕೆಲವು ಷರತ್ತುಗಳನ್ನು ವಿಧಿಸಿ, ಮುಂದಿನ 20 ವರ್ಷಗಳ ಅವಧಿಗೆ ಬಿಡುಗಡೆಗೊಳಿಸುವ ಕುರಿತು Stage-I ಅನುಮೋದನೆ ನೀಡಿರುತ್ತದೆ. ಸದ್ರಿ ಆದೇಶದಲ್ಲಿ ತಿಳಿಸಿದ ಷರತ್ತಿನಂತೆ ಬೇಡಿಕೆ ಪತ್ರ ನೀಡಲು ಉಲ್ಲೇಖ (2)ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರು ಸೂಚಿಸಿದ ಪ್ರಕಾರ ಈ ಕಛೇರಿಯ ಉಲ್ಲೇಖ (3)ರ ಬೇಡಿಕೆ ಪತ್ರದಲ್ಲಿ ಕಡಿಯುವ ಒಂದು ಮರದ ಬದಲಿಗೆ 10 ಗಿಡಗಳನ್ನು ನೆಡುವ ಬಗ್ಗೆ ಗಿಡವೊಂದರ ದರ ರೂ 1911.00 ರಂತೆ ಹಾಗೂ ಎನ್.ಪಿ.ವಿ ಒಟ್ಟು ರೂ. 33,48,296/– ನ್ನು ಪಾವತಿಸಲು ಉಪಯೋಗಿ ಸಂಸ್ಥೆಯವರಿಗೆ ತಿಳಿಸಲಾಗಿರುತ್ತದೆ.

ಆದರೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಉಲ್ಲೇಖ (4)ರ ಅಧಿಕೃತ ಜ್ಞಾಪನ ಪತ್ರದ ಪ್ರಕಾರ ಒಟ್ಟು ಕಡಿಯಬೇಕಾಗಿರುವ ಮರಗಳು 156 = ಪ್ರತಿ 12 ಮರಗಳಿಗೆ ರೂ. 1.28 ಲಕ್ಷದಂತೆ ಪಾವತಿಸಬೇಕಾಗಿರುವುದರಿಂದ ಕೇಂದ್ರ ಸರ್ಕಾರದ Stage-I ಅನುಮೋದನೆಯಲ್ಲಿ ವಿಧಿಸಿದ ಷರತ್ತಿನಂತೆ ಈ ಕೆಳಗೆ ನಮೂದಿಸಿದ ಉದ್ದೇಶಕ್ಕಾಗಿ ಪರಿಷ್ಕೃತ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

| ಕ್ರ ಸಂ | ವಿವರ | ಪರಿಮಾಣ (ಹೆ.ಗಳಲ್ಲಿ) | ಘಟಕ ದರ (ಲಕ್ಷಗಳಲ್ಲಿ) | ಮೊಬಲಗು (ಲಕ್ಷಗಳಲ್ಲಿ) |
|---|---|---|---|---|
| 01 | ಗುತ್ತಿಗೆ ಮೇಲೆ ಬಿಡುಗಡೆಗೆ ಪ್ರಸ್ತಾಪಿಸಿದ 0.352 ಹೆ. ಅರಣ್ಯ ಪ್ರದೇಶಕ್ಕೆ ಪಾವತಿಸಬೇಕಾದ ನಿವ್ವಳ ಮೌಲ್ಯ (ಎನ್.ಪಿ.ವಿ) | 0.352 | 10.43 | 3.67136 |

..2/-

| | | | | |
|---|---|---|---|---|
| 02 | ಕಡಿಯುವ 01 ಮರದ ಬದಲಿಗೆ ಅದರ 10 ಗಿಡಗಳನ್ನು ನೆಟ್ಟು ಬೆಳೆಸಲು ತಗಲುವ ವೆಚ್ಚ {ಒಟ್ಟು ಕಡಿಯಬೇಕಾಗಿರುವ ಮರಗಳು 156 = ಪ್ರತಿ 12 ಮರಗಳಿಗೆ ರೂ. 1.28 ಲಕ್ಷದಂತೆ ಪಾವತಿಸಬೇಕಾದ ಮೊತ್ತ (12 ಮರಗಳು X 13 = 156)} | 13 | 1.28 | 16.64 |
| | ಒಟ್ಟು | | | **20.31136** |

ಮೇಲೆ ತಿಳಿಸಿದ ಉದ್ದೇಶಗಳಿಗೆ ಒಟ್ಟು ರೂ. **20,31,136/–** (ಇಪ್ಪತ್ತು ಲಕ್ಷದ ಮೂವತ್ತೊಂದು ಸಾವಿರದ ನೂರ ಮೂವತ್ತಾರು ಮಾತ್ರ) ನ್ನು ಪಾವತಿಸಲು ತಿಳಿಸಿದೆ. ಸದ್ರಿ ಬೇಡಿಕೆ ಪತ್ರವನ್ನು **forestclearence.nic.in web portal** ನಲ್ಲಿ ಅಪ್‌ಲೋಡ್ ಮಾಡಿ, ನೋಡಲ್ ಅಧಿಕಾರಿಯವರಿಂದ ಅನುಮೋದನೆ ಪಡೆದ ನಂತರ **web portal** ನಿಂದ ಚಲನ್ ಜೆನರೇಟ್ ಮಾಡಿ ಅದರಲ್ಲಿ ನಮೂದಿಸಿದಂತೆ ಮೊತ್ತ ಪಾವತಿಸಲು ತಿಳಿಸಿದೆ. ಸದ್ರಿ ಮೊತ್ತವನ್ನು ಪಾವತಿಸಿದ ನಂತರ ಸಂಬಂಧಪಟ್ಟ ಬ್ಯಾಂಕ್‌ನವರು ದೃಡೀಕರಿಸಿದ ಮೂಲ ಚಲನ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಹಾಗೂ ಬಿಡುಗಡೆಗೆ ಪ್ರಸ್ತಾಪಿಸಿದ 0.352ಹೆ. ಪ್ರದೇಶದ ಸುತ್ತಲೂ 20 ಮೀಟರ್‌ಗೆ ಒಂದರಂತೆ ಕಾಂಕ್ರೀಟ್ ಪಿಲ್ಲರನ್ನು ನಿಮ್ಮ ವೆಚ್ಚದಲ್ಲಿ ಅಳವಡಿಸಲು ತಿಳಿಸಿದೆ. ಕೇಂದ್ರ ಸರ್ಕಾರದ ಎಲ್ಲಾ ಷರತ್ತುಗಳನ್ನು ಪಾಲಿಸಿದ ನಂತರ ಪಾಲನಾ ವರದಿಯನ್ನು **web portal** ನಲ್ಲಿ ಅಪ್‌ಲೋಡ್ ಮಾಡಿ, ಹಾರ್ಡ ಕಾಪಿಯನ್ನು 04 ಪ್ರತಿಗಳಲ್ಲಿ ಈ ಕಛೇರಿಗೆ ಸಲ್ಲಿಸುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ವಿಭಾಗ, ಕುಂದಾಪುರ

ಇವರಿಗೆ,

The Executive Officer,
Sri. Mookambika Temple,
Kollur – 576220,
Kundapur Taluk.

ಪ್ರತಿಯನ್ನು ಗೌರವಗಳೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಎಫ್‌ಸಿಎ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನು ಗೌರವಗಳೊಂದಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು, ಮಂಗಳೂರು ವೃತ್ತ, ಮಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪತ್ರಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉ.ಅ.ಸಂ.ರವರ ತಾಂತ್ರಿಕ ಸಹಾಯಕರು, ಕುಂದಾಪುರ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ವಲಯ ಅರಣ್ಯ ಅಧಿಕಾರಿ, ಬೈಂದೂರು ವಲಯ, ಬೈಂದೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಪ್ರಸ್ತಾವಿತ ಪ್ರದೇಶದ ಸುತ್ತಲೂ 20 ಮೀಟರ್‌ಗೆ ಒಂದರಂತೆ ಕಾಂಕ್ರೀಟ್ ಪಿಲ್ಲರನ್ನು ಅಳವಡಿಸಿದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸಲು ತಿಳಿಸಿದೆ.